ಆ) ಹಾಗಿದ್ದಲ್ಲಿ, ಈ ಕಾಲುವೆಗಳಲ್ಲಿ ತುಂಬಿರುವ ಹೂಳನ್ನು ತೆಗೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಹೂಳು ತೆಗೆಯುವ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಉತ್ತರ

ಅ) ಗಮನಕ್ಕೆ ಬಂದಿದೆ.

ಆ) ಪ್ರತಿ ಸಾಲಿನಲ್ಲಿ ನಾಲೆಗಳ ನಿರ್ವಹಣೆಯನ್ನು ಕೈಗೊಂಡು, ಜಂಗಲ್ ಮತ್ತು ಹೂಳನ್ನು ತೆಗೆಯಲಾಗುತ್ತಿದೆ.

ಅದರಂತೆ, ಸೂಳೆಕೆರೆ ಉತ್ತರ ನಾಲೆಯ 11 ಕಿ.ಮೀ. ಉದ್ದದಲ್ಲಿ ಕೆಲವು ಸ್ಥಳಗಳಲ್ಲಿ ತುಂಬಿದ್ದ ಹೂಳನ್ನು ಮತ್ತು ಬೆಳೆದಿದ್ದ ಜಂಗಲ್‌ನ್ನು 2012–13ನೇ ಸಾಲಿನಲ್ಲಿ ಖಾರೀಫ್ ಬೆಳೆಗೆ ನಾಲೆಯಲ್ಲಿ ನೀರನ್ನು ಹರಿಸುವ ಮುನ್ನ ರೂ.3.00 ಲಕ್ಷ ಅಂದಾಜು ಮೊತ್ತದಲ್ಲಿ ತೆಗೆಯಲಾಗಿರುತ್ತದೆ.

ಇ) ನಾಲೆಗಳಲ್ಲಿ ಕೆಲವು ಸ್ಥಳಗಳಲ್ಲಿ ಹೂಳು ತುಂಬುವುದು ಸಹಜ ಪ್ರಕ್ರಿಯೆಯಾಗಿದ್ದು, ಈ ರೀತಿ ಪುನಃ ಹೂಳು ತುಂಬಿದಲ್ಲಿ ಖಾರೀಫ್ ಬೆಳೆಗೆ ಈಗ ನಾಲೆಯಲ್ಲಿ ಹರಿಸುತ್ತಿರುವ ನೀರನ್ನು ನಿಲ್ಲಿಸಿದ ನಂತರ ಹೂಳು ತೆಗೆಸಲು ಕ್ರಮ ಕೈಗೊಳ್ಳಲಾಗುವುದು.

ಆಧುನೀಕರಣಗೊಳಿಸುವುದು

335 : (432)

ಶ್ರೀ ಸಂಗಮೇಶ್ವರ ಬಿ.ಕೆ (ಭದ್ರಾವತಿ)

ಪ್ರಶ್ನೆ

ಅ) ಭದ್ರಾವತಿ ತಾಲ್ಲೂಕಿನ ಗೊಂದಿ ಕಾಲುವೆಯನ್ನು (ಚಾನಲ್) ಆಧುನೀಕರಣಗೊಳಿಸುವ ಬಗ್ಗೆ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈವರೆವಿಗೂ ಸರ್ಕಾರ ಕ್ರಮ ಕೈಗೊಳ್ಳದಿರುವ ಕಾರಣಗಳೇನು (ವಿವರ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಉತ್ತರ

ಅ) ಬಂದಿದೆ.

ಆ) ಗೊಂದಿ ಅಣೆಕಟ್ಟಿನ ಎಡದಂಡೆ ಹಾಗೂ ಬಲದಂಡೆ ನಾಲೆಗಳ ಆಧುನೀಕರಣ ಕಾಮಗಾರಿಯ ರೂ.82.00 ಕೋಟಿಗಳ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ:ಜ.ಸಂ.ಇ 24 ಎಂ.ಎಂ.ಬಿ 2012 ಬೆಂಗಳೂರು ದಿ: 18.8.2012.ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ ಹಾಗೂ ಸದರಿ ಯೋಜನೆಯ ವಿವರವಾದ ಯೋಜನಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಿ ತೀರುವಳಿ ಪಡೆಯಲು ಕ್ರಮ ಕೈಗೊಳ್ಳಲಾಗಿರುತ್ತದೆ. ಈ ಬಗ್ಗೆ ಕೇಂದ್ರ ಜಲ ಆಯೋಗದಿಂದ ತೀರುವಳಿ ಪಡೆದು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಚಾಮನಹಳ್ಳಿ ಮತ್ತು ಬೈರನ್ ನಾಲಾ ಲೈನಿಂಗ್ ಕಾಮಗಾರಿ ಅಪೂರ್ಣವಾಗಿರುವುದು

286 : (141)

ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು)

ಪ್ರಶ್ನೆ

ಅ) ಮದ್ದೂರು ತಾಲ್ಲೂಕು ಚಾಮನಹಳ್ಳಿ ಮತ್ತು ಬೈರನ್ ನಾಲಾ ಲೈನಿಂಗ್ ಕಾಮಗಾರಿಯು ಮೂರು ವರ್ಷಗಳಿಂದ ಪೂರ್ಣವಾಗದೆ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಇ) ಈ ಕಾಮಗಾರಿಗಾಗಿ ಸರ್ಕಾರ ನಿಗದಿಪಡಿಸಿದ್ದ ಅನುದಾನದ ಮೊತ್ತವೆಷ್ಟು? ಇದುವರೆವಿಗೂ ವೆಚ್ಚವಾಗಿರುವ ಹಾಗೂ ಉಳಿಕೆ ಕಾಮಗಾರಿಗಾಗಿ ಬೇಕಾಗಿರುವ ಮೊತ್ತವೆಷ್ಟು (ಪೂರ್ಣ ವಿವರಗಳನ್ನು ನೀಡುವುದು)

ಈ) ಈ ಕೆರೆಗಳಿಂದ ಎಷ್ಟು ಕೃಷಿ ಜಮೀನಿಗೆ ನೀರು ಒದಗಿಸಬಹುದಾಗಿರುತ್ತದೆ.